# ನಿವೇದನೆ

## ಮಕ್ಕಳಿಸ್ಕೂಲು ಬೀದೀಲಲ್ವೇ...

> ಲಕ್ಷಾಂತರ ಮಕ್ಕಳು ಶಾಲೆಗಳಿಂದ ಹೊರಗುಳಿದಿರುವ ಸ್ಥಿತಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ಘೋಷಣೆಯ 'ಮಕ್ಕಳ ಶಿಕ್ಷಣ ಹಕ್ಕು' ಕಾಯ್ದೆಯ ಅಣಕವಲ್ಲದೆ ಮತ್ತೇನೂ ಅಲ್ಲ. 1ನೇ ತರಗತಿಯ ಹೆಣ್ಣುಮಕ್ಕಳಿಗೆ ದಿನಕ್ಕೆ 2 ರೂಪಾಯಿ ಹಾಜರಾತಿ ಭತ್ಯೆ ನೀಡುವುದು ಸೇರಿದಂತೆ, ಪ್ರಾಥಮಿಕ ಶಿಕ್ಷಣಕ್ಕೆ ಉತ್ತೇಜನ ನೀಡಲು ಸರ್ಕಾರ ಅನೇಕ ಕಾರ್ಯಕ್ರಮಗಳನ್ನು ಪ್ರಕಟಿಸಿದ್ದರೂ ಹೀಗೇಕೆ ಆಗಿದೆ?

ಕ್ರಿಸ್‌ಮಸ್‌ನ ಸಣ್ಣರಜೆ ಮುಗಿಸಿಕೊಂಡು ಮಕ್ಕಳು ಶಾಲೆಗಳತ್ತ ಲಗುಬಗೆಯಿಂದ ಹೊರಟಿರುವ ಸಂದರ್ಭದಲ್ಲೇ, ರಾಜ್ಯದ ಸುಮಾರು 2.24 ಲಕ್ಷ ಮಕ್ಕಳು ಮನೆಗಳಲ್ಲಿ ಅಥವಾ ಬೀದಿಗಳಲ್ಲಿ ಉಳಿದಿರುವ ಆಘಾತಕಾರಿ ಸುದ್ದಿ ಹೊರಬಿದ್ದಿದೆ. ಇದು ಯಾವುದೋ ಖಾಸಗಿ ಸಂಸ್ಥೆ ನಡೆಸಿರುವ ಸಮೀಕ್ಷೆಯ ಮುಖ್ಯಾಂಶವಲ್ಲ. ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಒಳಗೊಂಡ ಸಮಿತಿ ನಡೆಸಿರುವ ಗಣತಿಯ ಸಾರವಿದು. ಹೈಕೋರ್ಟ್ ಸೂಚನೆಯ ಮೇರೆಗೆ ನಡೆದ ಸಮೀಕ್ಷೆ ಇದೆನ್ನುವುದು ಗಮನಾರ್ಹ. ವೈಜ್ಞಾನಿಕ ನೆಲೆಗಟ್ಟಿನಲ್ಲಿ ನಡೆದಿದೆ ಎನ್ನಲಾದ ಈ ಸಮೀಕ್ಷೆಯ ಅಂಕಿ ಅಂಶಗಳು ಹೆಚ್ಚು ವಸ್ತುನಿಷ್ಠವಾಗಿರುವ ಸಾಧ್ಯತೆಗಳಿವೆ. ಶಾಲೆಗಳಿಂದ ಹೊರಗುಳಿದ ಮಕ್ಕಳ ಸಂಖ್ಯೆ ಜನಸಾಮಾನ್ಯರನ್ನು ಕಂಗೆಡಿಸುವ ಮಾತಿರಲಿ, ಸ್ವತಃ ಶಿಕ್ಷಣ ಇಲಾಖೆಯೇ ಸಮೀಕ್ಷೆ ಬೆಟ್ಟು ಮಾಡಿರುವ ಮುಖ್ಯಾಂಶಗಳಿಂದ ಗಾಬರಿಗೊಂಡಿರುವುದು ಸ್ಪಷ್ಟವಾಗಿದೆ. ಆ ಕಾರಣದಿಂದಲೇ ಈವರೆಗೆ ಸಮೀಕ್ಷೆಯ ಮುಖ್ಯಾಂಶಗಳನ್ನು ಬಹಿರಂಗಪಡಿಸುವ ಗೋಜಿಗೆ ಇಲಾಖೆ ಹೋಗಿಲ್ಲ. ಅಷ್ಟು ಮಾತ್ರವಲ್ಲ, ಸಮೀಕ್ಷೆಯ ಅಂಕಿ ಅಂಶಗಳನ್ನು ಮರು ಪರಿಶೀಲನೆಗೆ ಒಳಪಡಿಸುವ ಕೆಲಸವೂ ನಡೆದಿದೆ.

ಹಾಗೆ ನೋಡಿದರೆ ಶಾಲೆಯಿಂದ ಹೊರಗುಳಿದಿರುವ ಮಕ್ಕಳ ಸರಿಯಾದ ಅಂಕಿ ಅಂಶ ನೀಡುವಲ್ಲಿ ಶಿಕ್ಷಣ ಇಲಾಖೆ ಮೊದಲಿನಿಂದಲೂ ಮುಚ್ಚುಮರೆ ನೀತಿಯನ್ನು ಅನುಸರಿಸುತ್ತಿದೆ. ಈ ಮೊದಲು 6ರಿಂದ 14 ವರ್ಷದೊಳಗಿನ 51,994 ಮಕ್ಕಳು ಶಾಲೆಗಳಿಂದ ವಂಚಿತರಾಗಿದ್ದಾರೆ ಎಂದು ಇಲಾಖೆ ತಿಳಿಸಿತ್ತು. ಈ ಅಂಕಿ ಅಂಶಗಳನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿದ್ದ ಸಾಮಾಜಿಕ ಕಾರ್ಯಕರ್ತೆ ಕಾತ್ಯಾಯಿನಿ ಚಾಮರಾಜ್ ಅವರು, ಸುಮಾರು 6, 28,047 ಮಕ್ಕಳು ಶಾಲೆಯಿಂದ ಹೊರಗುಳಿದಿದ್ದಾರೆ ಎಂದು ವಾದಿಸಿದ್ದರು. 2005–06ರಿಂದ 2011–12ರ ಅವಧಿಯಲ್ಲಿ 1ನೇ ತರಗತಿಗೆ 78,76,110 ಮಕ್ಕಳು ಪ್ರವೇಶ ಪಡೆದಿದ್ದು, 2012–13ರ ಶೈಕ್ಷಣಿಕ ವರ್ಷದಲ್ಲಿ 72,48,063 ಮಕ್ಕಳು 2ರಿಂದ 8ನೇ ತರಗತಿಗಳಲ್ಲಿ ಓದುತ್ತಿದ್ದಾರೆ ಎಂದು ಸರ್ಕಾರಿ ದಾಖಲೆಗಳು ಹೇಳುತ್ತಿವೆ. ಈ ಲೆಕ್ಕಾಚಾರದ ಪ್ರಕಾರವೇ 6, 28,047 ಮಕ್ಕಳು ಶಾಲೆಗಳಿಂದ ಹೊರಬಿದ್ದಿದ್ದಾರೆ ಎನ್ನುವುದು ಕಾತ್ಯಾಯಿನಿ ಅವರ ವಾದ. ಈ ಸರಳ ತರ್ಕದ ಹಿನ್ನೆಲೆಯಲ್ಲಿ, ಶಿಕ್ಷಣ ಇಲಾಖೆಯ ಅಂಕಿ ಅಂಶಗಳ ಬಗ್ಗೆ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿತ್ತು.

ಹೈಕೋರ್ಟ್ ಸೂಚನೆಯ ಮೇರೆಗೆ ಕಳೆದ ನವೆಂಬರ್‌ನಲ್ಲಿ ನಡೆದ ಸಮೀಕ್ಷೆಯಲ್ಲಿ ಕ್ಲಸ್ಟರ್, ಬ್ಲಾಕ್ ಹಾಗೂ ಜಿಲ್ಲಾ ಹಂತದ ಅಧಿಕಾರಿಗಳ ಜೊತೆಗೂ ಮಾಹಿತಿ ವಿನಿಮಯ ನಡೆಸಲಾಗಿತ್ತು. ಈ ಕಸರತ್ತಿನಲ್ಲಿ ಹೊಮ್ಮಿರುವ ಫಲಿತಾಂಶವೇ 2.24 ಲಕ್ಷ ಮಕ್ಕಳು ಶಾಲೆಗಳಿಂದ ಹೊರಗುಳಿದಿದ್ದಾರೆ ಎನ್ನುತ್ತಿದೆ. ಈ ಪ್ರಮಾಣ ಸರ್ಕಾರದ ಈ ಮೊದಲ ಲೆಕ್ಕಾಚಾರಕ್ಕಿಂತ ಸುಮಾರು ನಾಲ್ಕು ಪಟ್ಟು ಹೆಚ್ಚಾಗಿದೆ. ಅಂದ ಹಾಗೆ, ಸುಮಾರು 27 ಸಾವಿರ ಮಕ್ಕಳು ಇದುವರೆಗೆ ಶಾಲೆಯ ಮುಖವನ್ನೇ ನೋಡಿಲ್ಲ ಹಾಗೂ ಈ ಮಕ್ಕಳ ದಾಖಲಾತಿ ಯಾವ ಶಾಲೆಗಳಲ್ಲೂ ನಡೆದಿಲ್ಲ ಎನ್ನುವುದನ್ನೂ ಸಮೀಕ್ಷೆ ಗುರ್ತಿಸಿದೆ.

ಲಕ್ಷಾಂತರ ಮಕ್ಕಳು ಶಾಲೆಗಳಿಂದ ಹೊರಗುಳಿದಿರುವ ಸ್ಥಿತಿ ಉಚಿತ ಮತ್ತು ಕಡ್ಡಾಯ ಶಿಕ್ಷಣ ಘೋಷಣೆಯ 'ಮಕ್ಕಳ ಶಿಕ್ಷಣ ಹಕ್ಕು' ಕಾಯ್ದೆಯ ಅಣಕವಲ್ಲದೆ ಮತ್ತೇನೂ ಅಲ್ಲ. 1ನೇ ತರಗತಿಯ ಹೆಣ್ಣುಮಕ್ಕಳಿಗೆ ದಿನಕ್ಕೆ 2 ರೂಪಾಯಿ ಹಾಜರಾತಿ ಭತ್ಯೆ ನೀಡುವುದು ಸೇರಿದಂತೆ, ಪ್ರಾಥಮಿಕ ಶಿಕ್ಷಣಕ್ಕೆ ಉತ್ತೇಜನ ನೀಡಲು ಸರ್ಕಾರ ಅನೇಕ ಕಾರ್ಯಕ್ರಮಗಳು ಪ್ರಕಟಿಸಿದೆ. ಪ್ರಸಕ್ತ ಬಜೆಟ್‌ನ ಶೇ.12ರಷ್ಟು ಮೊತ್ತ ಶಿಕ್ಷಣ ಕ್ಷೇತ್ರಕ್ಕೆ ಮೀಸಲಾಗಿದೆ. ಹೀಗೆ, ಸರ್ಕಾರದ ಕಾರ್ಯಕ್ರಮಗಳ ಭರಾಟೆ ಒಂದೆಡೆಯಿದ್ದರೆ, ಇನ್ನೊಂದೆಡೆ ಶಾಲೆಯಿಂದ ಹೊರಗುಳಿಯುವ ಮಕ್ಕಳ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. ಸರ್ಕಾರಿ ಕಾರ್ಯಕ್ರಮಗಳ ಅನುಷ್ಠಾನ ಸಮರ್ಪಕವಾಗಿಲ್ಲ ಎನ್ನುವುದನ್ನು ಶಾಲೆಗಳಿಂದ ಹೊರಗುಳಿದ ಈ ಮಕ್ಕಳು ಸಂಕೇತಿಸುತ್ತಿದ್ದಾರೆ.

ಶಾಲೆಯಿಂದ ಹೊರಬಿದ್ದ ಮಕ್ಕಳ ಕುರಿತಂತೆ ಸರ್ಕಾರದ ವರದಿಯು 2014ರ ಫೆಬ್ರುವರಿಯಲ್ಲಿ ಹೈಕೋರ್ಟ್‌ಗೆ ಸಲ್ಲಿಕೆಯಾಗಲಿದೆ. ಅದಕ್ಕೆ ಮುನ್ನ ಪ್ರಸ್ತುತ ಸಮೀಕ್ಷೆಯ ಅಂಕಿ ಅಂಶಗಳ ಮರುಪರಿಶೀಲನೆ ನಡೆಸುವ ಪ್ರಯತ್ನವನ್ನು ಶಿಕ್ಷಣ ಇಲಾಖೆ ಮಾಡುತ್ತಿದೆ. ಈ ನಿಟ್ಟಿನಲ್ಲಿ ಸರ್ಕಾರ ಒಂದು ಸಂಗತಿಯನ್ನು ನೆನಪಿನಲ್ಲಿಟ್ಟುಕೊಳ್ಳಬೇಕಾಗಿದೆ. ಅಂಕಿ ಅಂಶಗಳನ್ನು ಮರೆಮಾಚುವುದರಿಂದ ಯಾವುದೇ ಉಪಯೋಗವಿಲ್ಲ. ಬದಲಿಗೆ, ಸಮರ್ಪಕ ಶಿಕ್ಷಣ ಹೊಂದುವ ಮಕ್ಕಳ ಹಕ್ಕನ್ನು ಪೂರೈಸುವ ನಿಟ್ಟಿನಲ್ಲಿ ಮತ್ತಷ್ಟು ಕ್ರಿಯಾಶೀಲವಾಗುವ ಸಂಕಲ್ಪ ಸರ್ಕಾರದ್ದಾಗಬೇಕಿದೆ. 'ಅಂಕಿ ಅಂಶಗಳು ಏನೇ ಇರಲಿ, ಮಕ್ಕಳನ್ನು ಮರಳಿ ಶಾಲೆಗೆ ಕರೆತನ್ನಿ' ಎನ್ನುವ ಹೈಕೋರ್ಟ್‌ನ ಸಲಹೆಯ ಇಂಗಿತವೂ ಇದೇ ಆಗಿದೆ.

■ **ರಘುನಾಥ ಚ.ಹ.**




ಈಶ್ವರ್